**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 87/2023**

**ಡಿ ಡಬ್ಲ್ಯೂ/1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು ದಿಃ 09.09.2025**

**ಮುಂ. ಪಾಟೀ ಸವಾಲುಃ ಶ್ರೀ ಎಫ್ ವಿ ಎಚ್ ವಕೀಲರಿಂದ ವಾದಿ ಪರ ವಕೀಲರುಃ**

16. ಸಾಮಾನ್ಯವಾಗಿ ಒಂದು ಪ್ರೊಜೆಕ್ಟನ್ನು ಜಾರಿ ತರುವ ಮುನ್ನ ಆ ಬಗ್ಗೆ ಒಂದು ಪತ್ರಿಕಾ ಪ್ರಕಟಣೆ ಮಾಡಬೇಕಾಗಿರುತ್ತದೆ ಎಂದರೆ ಸರಿಯಲ್ಲ. ಅದೇ ಪ್ರಕಾರ ಸಂಬಂದಪಟ್ಟ ಜಮೀನಿನ ಮಾಲೀಕರಿಗೆ ನೋಟಿಸ್ಸು ನೀಡಬೇಕಾಗುತ್ತದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನಾವು ಪರಿಹಾರವನ್ನು ನೀಡುವ ಮುನ್ನ ಅವರಿಂದ ಸ್ಟ್ಯಾಂಪ ಹಾಳೆ ಮೇಲೆ ಅವರ ಸಹಿಯನ್ನು ಪಡೆದ ನಂತರ ಅವರಿಗೆ ಪರಿಹಾರ ಹಣವನ್ನು ನೀಡಿ ಅವರಿಂದ ಸಮ್ಮತಿ ಪಡೆಯುತ್ತೇವೆ ಎಂದರೆ ಸರಿ. ವಾದಿಯರಿಗೆ ಯಾವ ದಿನಾಂಕದಂದು ಪರಿಹಾರದ ಹಣ ನೀಡಿ ಅವರ ಸಹಿಯನ್ನು ಸ್ಟ್ಯಾಂಪ ಪೇಪರ ಮೇಲೆ ಪಡೆದು, ಅವರ ಸಮ್ಮತಿಯನ್ನು ಪಡೆದ ದಿನಾಂಕ ನೆನೆಪು ಇಲ್ಲ. ವಾದಿಗೆ ಎಷ್ಟು ಹಣ ಪರಿಹಾರವಾಗಿ ನೀಡಿದ್ದು ಎಂದು ಈಗ ಹೇಳಲು ಬರುವುದಿಲ್ಲ.

17. ಫಲಾನುಭವಿಗೆ ಪರಿಹಾರ ನೀಡಿರುವ ಬಗ್ಗೆ ನಮ್ಮ ಕಂಪನಿಯ ಕಡತಗಳಲ್ಲಿ ಇರುತ್ತವೆ ಎಂದರೆ ಸರಿ. ವಾದಿಗೆ ಸಂಬಂದಪಟ್ಟ ಪರಿಹಾರ ಹಣದ ಕಡತವನ್ನು ನ್ಯಾಯಾಲಯಕ್ಕೆ

ಹಾಜರು ಮಾಡಿರುವುದಿಲ್ಲ. ನಾವು ವಾದಿಗೆ ಯಾವುದೇ ಪರಿಹಾರ ಹಣವನ್ನು ನೀಡದ ಕಾರಣ ಮತ್ತು ಅವರಿಂದ ಸಮ್ಮತಿಯನ್ನು ಪಡೆಯದ ಕಾರಣ ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

18. ಸಾಕ್ಷಿ ಕರ್ನಾಟಕ ಸರಕಾರದ ನಡವಳಿಗಳು ಹಾಗೂ ಅದರ ಆದೇಶದ ದೃಢೀಕೃತ ಪ್ರತಿಯನ್ನು ಒಪ್ಪಿದ್ದರಿಂದ ನಿಪಿಃ11 ಎಂದು ಗುರುತಿಸಲಾಯಿತು. ನಿಪಿಃ11 ರ ಪ್ರಕಾರ ವಾದಿಯರ ಜಮೀನಾದ ಸ.ನಂಃ80/4 ನ್ನು ಬಿಟ್ಟು, ಸದರಿ ಜಮೀನಿಗೆ ಹತ್ತಿದ ಪೂರ್ವದ ಕಡೆಯ ಜಮೀನು ಎಂದರೆ ಸ.ನಂಃ79 ರಲ್ಲಿ ನಾಲ್ಕು ಪೋಡುಗಳನ್ನು ಸ್ಥಾಪಿಸುವಂತೆ ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿಃ11 ರಲ್ಲಿ ಸ.ನಂಃ79 ಯಾಕೆ ನಮೂದು ಮಾಡಲಾಯಿತು ಎಂದರೆ ಸಾಕ್ಷಿ ವಿಂಡ್ ಎನರ್ಜಿ ಕನ್ವರ್ಟನ್ನು ಸ್ಥಾಪಿಸಲು ಎಂದು ನುಡಿಯುತ್ತಾರೆ.

19. ನಾನು ಸ.ನಂಃ79 ರ ಜಮೀನನ್ನು ನೋಡಲು ಹೋಗಿರುತ್ತೇನೆ. ನಾನು ಹೇಳುವ ರೀತಿಯಲ್ಲಿ ಸ.ನಂಃ79 ರಲ್ಲಿ ವಿಂಡ್ ಎನರ್ಜಿ ಕನ್ವರ್ಟನ್ನು ಸ್ಥಾಪಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಮುಂದಿನ ಮುದ್ದತ್ತನಂದು ಪೋಟೋವನ್ನು ಹಾಜರುಪಡಿಸುತ್ತೇನೆ ಎಂದರೆ ಸರಿ. ನಮ್ಮ ಕಂಪನಿ ಖಾಸಗೀ ಕಂಪನಿ ಎಂದರೆ ಸರಿ. ನಾವು ವಿದ್ಯುತನ್ನು ಉತ್ಪಾದಿಸಿ ಅದನ್ನು ಲಾಭಗೋಸ್ಕರ ಮಾರಾಟ ಮಾಡುತ್ತೇವೆ ಎಂದರೆ ಸಾಕ್ಷಿ ಕೆಪಿಟಿಸಿಎಲ್ ಗೆ ಮಾರಾಟ ಮಾಡುತ್ತೇವೆ, ಆದರೆ ಲಾಭಕ್ಕಾಗಿ ಅಲ್ಲ ಎಂದು ನುಡಿಯುತ್ತಾರೆ. ನಾವು ಲಾಭಕ್ಕಾಗಿ ಕಾನೂನುಬಾಹಿರ ಕೆಲಸ ಮಾಡುತ್ತೇವೆ ಎಂದರೆ ಸರಿಯಲ್ಲ. ನಾನು ಈಗ ಹೇಳಿದ ಸಾಕ್ಷಿ ಬೇರೆಯವರಿಂದ ಮಾಹಿತಿ ಪಡೆದು ಹಾಗೂ ಅವರು ಹೇಳಿದ್ದನ್ನು ಕೇಳಿಕೊಂಡು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

20. ನಾನು 2018 ರಲ್ಲಿ ಪ್ರತಿವಾದಿಯರ ಕಂಪನಿಯಲ್ಲಿ ಸೇರಿಕೊಂಡಿರುತ್ತೇನೆ. ನನಗೆ ತಡಸ ಪ್ರೊಜೆಕ್ಟ ಬಗ್ಗೆ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಂಪನಿ ಲಾಭಕ್ಕಾಗಿ ಹಾಗೂ ಕಂಪನಿಗೆ ಅನುಕೂಲವಾಗುವ ರೀತಿಯಲ್ಲಿ ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/-**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**